ಜೋಳಕ್ಕೆ ಬೆಂಬಲ ಬೆಲೆ ನಿಗದಿಪಡಿಸುವುದು.

2319(3412) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನ ಬಾಗೇವಾಡಿ) :— ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಉತ್ತರ ಕರ್ನಾಟಕದ ಭಾಗದ ರೈತರು ಬೆಳೆಯುವ ಪ್ರಮುಖ ಆಹಾರ ಬೆಳೆ ಜೋಳಕ್ಕೆ ಬೆಂಬಲ ಬೆಲೆಯನ್ನು ಸರ್ಕಾರದ ನಿಗಧಿ ಮಾಡಿದೆಯೇ?

ಆ) ಮಾಡಿದ್ದಲ್ಲಿ ನಿಗಧಿತ ಬೆಲೆ ಎಷ್ಟು;

ಇ) ಜೋಳವನ್ನು ಲೆವಿಯಲ್ಲಿ ಖರೀದಿಸಿ ಪಡಿತರ ಮುಖಾಂತರ ಹಂಚುವ ವಿಚಾರ ಸರ್ಕಾರದ ಪರಿಸೀಲನೆಯಲ್ಲಿದೆಯೇ;

ಈ) ಹಾಗಿದ್ದಲ್ಲಿ, ರೈತರಿಗೆ ಕ್ವಿಂಟಾಲ್ ಜೋಳಕ್ಕೆ ಕೊಡುವ ನಿಗದಿತ ದರವೆಷ್ಟು ;

ಉ) ಇದನ್ನು ಎಂದಿನಿಂದ ಕಾರ್ಯಾನುಷ್ಠಾನಕ್ಕೆ ತರಲು ಉದ್ದೇಶಿಸಲಾಗಿದೆ; ವಿವರ ನೀಡುವುದು.

ಶ್ರೀ ಡಿ.ಬಿ. ಇನಾಂದಾರ್ (ಆಹಾರ ಮತ್ತು ನಾಗರಿಕ ಸರಬರಾಜು ರಾಜ್ಯ ಸಚಿವರು) :—

ಅ) ಹೌದು

ಆ) ಕ್ವಿಂಟಾಲಿಗೆ ರೂ. 445-00

ಇ) ಇಲ್ಲ

ಈ) ಉದ್ಭವಿಸುವುದಿಲ್ಲ

ಉ) ಉದ್ಭವಿಸುವುದಿಲ್ಲ

ಬಿಜಾಪುರ ದೋಣಿ ನದಿಯ ಹೂಳೆತ್ತುವ ಕಾರ್ಯ.

2320(3413) ಶ್ರೀ ಎಸ್.ಕೆ. ಬೆಳ್ಳುಬ್ಬಿ (ಬಸವನ ಬಾಗೇವಾಡಿ) :— ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಬಿಜಾಪುರ ದೋಣಿ ನದಿಯ ಹೂಳೆತ್ತುವ ಕಾರ್ಯ ಪರಿಶೀಲನೆಯಲ್ಲಿದೆಯೇ?

ಆ) ಹಾಗಿದ್ದಲ್ಲಿ ಸದರಿ ಯೋಜನೆಗೆ ಸರ್ಕಾರ ನಿಗಧಿಪಡಿಸಿರುವ ಹಣವೆಷ್ಟು?

ಇ) ಈ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು?